# ಗುಲಬರ್ಗಾ ವಿದ್ಯುತ ಸರಬರಾಜು ಕಂಪನಿ ನಿಯಮಿತ

ದೂರವಾಣಿ ಸಂಖ್ಯೆ (08472) 256782
ಫ್ಯಾಕ್ಸ ಸಂಖ್ಯೆ:- (08472) 256842

ನಿಗಮ ಕಾರ್ಯಾಲಯ
ಜೆಸ್ಕಾಂ ಕಲಬುರಗಿ

ಜೆಸ್ಕಾಂ/ಪ್ರ.ವ್ಯ/ಉಲೆನಿ (ಮಾ.ಸಂ.ಅ)/1404/2018-19/ 4411-435 ದಿನಾಂಕ : 30 JUL 2018

## ಸುತ್ತೋಲೆ

ವಿಷಯ :- ಬಡ್ತಿಪೂರ್ವ ಮತ್ತು ವೃತ್ತಿ ಪೂರ್ವ ತರಬೇತಿ ಪರೀಕ್ಷೆಗಳಲ್ಲಿ ಅನುತ್ತೀರ್ಣರಾದ /ಫೇಲಾದ ಕಿರಿಯ ಇಂಜಿನಿಯರ (ವಿ),/ಮಾಪಕ ಓದುಗ/ಮೇಲ್ವಿಚಾರಕ/ಆಪರೇಟರ/ನಿರ್ವಹಣಾ ಸಿಬ್ಬಂದಿ/ಕಿರಿಯ ಮಾಪಕ ಓದುಗರ ಅಭ್ಯರ್ಥಿಗಳಿಗೆ ದಿನಾಂಕ: 14.09.2018 ರಂದು ಮರು ಪರೀಕ್ಷೆ ನಡೆಸುವ ಕುರಿತು.

ಉಲ್ಲೇಖ: ಪ್ರ.ವ್ಯ/ಉಲೆನಿ(ಮಾಸಂಅ)/ಜಿ-11/1210/2018-19/19460-500/ದಿನಾಂಕ: 18.07.2018.

** **** **

ಈ ಹಿಂದೆ ಜರುಗಿದ ಬಡ್ತಿಪೂರ್ವ ಮತ್ತು ವೃತ್ತಿಪೂರ್ವ ತರಬೇತಿ ಪರೀಕ್ಷೆಗಳಲ್ಲಿ ಅನುತ್ತೀರ್ಣರಾದ/ ಫೇಲಾದ ಕಿರಿಯ ಇಂಜಿನಿಯರ (ವಿ),/ಮಾಪಕ ಓದುಗ/ ಮೇಲ್ವಿಚಾರಕ/ ಆಪರೇಟರ/ನಿರ್ವಹಣಾ ಸಿಬ್ಬಂದಿ/ ಕಿರಿಯ ಮಾಪಕ ಓದುಗರ ಅಭ್ಯರ್ಥಿಗಳಿಗೆ ದಿನಾಂಕ: 14.09.2018 ರಂದು ಮರು ಪರೀಕ್ಷೆ ನಡೆಸಲು ಉದ್ದೇಶಿಸಲಾಗಿದೆ.

I. ಪರೀಕ್ಷಾ ಶುಲ್ಕ ವಿನಾಯಿತಿ ಹೊಂದಿಲ್ಲದ ಅಭ್ಯರ್ಥಿಗಳು ರೂ. 300/- ಪರೀಕ್ಷಾ ಶುಲ್ಕವನ್ನು ನಿಗಮದ ಯಾವುದಾದರು ಕಛೇರಿಯಲ್ಲಿ ದಿನಾಂಕ: 06.08.2018 ರಿಂದ 18.08.2018 ರ ಒಳಗೆ ಪಾವತಿಸತಕ್ಕದ್ದು.

II. ಅಭ್ಯರ್ಥಿಗಳು ಭರ್ತಿ ಮಾಡಿದ ಅರ್ಜಿಗಳನ್ನು ಸಂಬಂಧಪಟ್ಟ ವೇತನ ವಿತರಣಾಧಿಕಾರಿಗಳಿಗೆ ಸಲ್ಲಿಸಲು ಕೊನೆಯ ದಿನಾಂಕ: 21.08.2018.

III. ಅಭ್ಯರ್ಥಿಗಳು ಭರ್ತಿ ಮಾಡಿ ಸಲ್ಲಿಸಿದ ಎಲ್ಲಾ ಅರ್ಜಿಗಳನ್ನು ವೇತನ ವಿತರಣಾಧಿಕಾರಿಗಳು ಪರಿಶೀಲಿಸಿ ದೃಢೀಕರಿಸಿ ಸಂಬಂಧಪಟ್ಟ ಕಛೇರಿಯಿಂದ ಕ್ರೋಢೀಕರಿಸಿದ ಪತ್ರದೊಂದಿಗೆ ಪ್ರಧಾನ ವ್ಯವಸ್ಥಾಪಕರು (ಆ ಮತ್ತು ಮಾ.ಸಂ.ಅ) ನಿಗಮ ಕಛೇರಿ, ಗುವಿಸಕಂನಿ., ಕಲಬುರಗಿರವರಿಗೆ ಸಲ್ಲಿಸಲು ಕೊನೆಯ ದಿನಾಂಕ : 25.08.2018.

**ಅಭ್ಯರ್ಥಿಗಳಿಗೆ ಸೂಚನೆಗಳು :**

1. ಅಭ್ಯರ್ಥಿಗಳು ನಿಗದಿತ ಹೊಸ ನಮೂನೆಯ ಅರ್ಜಿಯನ್ನು ಗುವಿಸಕಂನಿಯ ವೆಬ್‌ಸೈಟ್‌ನಿಂದ ಪಡೆದು (www.gescom.in ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗಿದೆ.)
2. ಇಲಾಖಾ ಪರೀಕ್ಷೆಗೆ ನಿಗದಿಪಡಿಸಿರುವ ಪರೀಕ್ಷಾ ಶುಲ್ಕ ರೂ.300/- (ಮೂರು ನೂರು ರೂಪಾಯಿಗಳು ಮಾತ್ರ) ಎರಡು ಪ್ರಯತ್ನಗಳಿಗೆ ಮಾತ್ರ ಅಭ್ಯರ್ಥಿಗಳಿಗೆ ಉಚಿತವಾಗಿ ಅನುಮತಿ ನೀಡಲಾಗುವುದು. ತದನಂತರ ಗೊತ್ತುಪಡಿಸಿರುವ ಶುಲ್ಕವನ್ನು ನಿಗಮದ ಯಾವುದಾದರೂ ಕಛೇರಿಯಲ್ಲಿ ಸಂದಾಯ ಮಾಡಿ ಮೂಲ ರಶೀದಿಯನ್ನು ಅರ್ಜಿಯಲ್ಲಿ ಒದಗಿಸಿರುವ ಸ್ಥಳದಲ್ಲಿ ಅಂಟಿಸಬೇಕು. ಒಂದು ಅವಧಿಯ ಪರೀಕ್ಷೆಗೆ ಸಂದಾಯವಾದ ಶುಲ್ಕವನ್ನು ಮುಂದಿನ ಅವಧಿಯ ಪರೀಕ್ಷೆಗಳಿಗೆ ಹೊಂದಿಸಲಾಗುವುದಿಲ್ಲ ಹಾಗೂ ಅಜಾಗರೂಕತೆಯಿಂದ ಹೆಚ್ಚಾಗಿ ಕಟ್ಟಿರುವ ಶುಲ್ಕವನ್ನು ಹೊಂದಾಣಿಕೆ ಮಾಡಲಾಗುವುದಿಲ್ಲಾ.
3. ಪರಿಪೂರ್ಣವಾಗಿ ಭರ್ತಿಮಾಡಿ, ಸಹಿಯನ್ನು ದಾಖಲಿಸಿ ಇತ್ತೀಚಿನ ಪಾಸ್‌ಪೋರ್ಟ್ ಅಳತೆಯ ಭಾವಚಿತ್ರವನ್ನು ಅರ್ಜಿಯ ಹಾಗೂ ಪ್ರವೇಶ ಪತ್ರದ ಮೇಲೆ ಕಡ್ಡಾಯವಾಗಿ ಅಂಟಿಸಿ ಸಂಬಂಧಪಟ್ಟ ಮುಖ್ಯಸ್ಥರಿಂದ ದೃಢೀಕರಿಸಿದ ಅರ್ಜಿಯನ್ನು ವೇತನ ವಿತರಣಾಧಿಕಾರಿಗಳಿಗೆ ದಿನಾಂಕ: 25.08.2018 ರ ಒಳಗೆ ಸಲ್ಲಿಸತಕ್ಕದ್ದು.